ಉಪನಿರ್ದೇಶಕರ ಕಛೇರಿ
ಉಡುಪಿ
28 JAN 2016

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಸಿ4(10) ಆಂ.ಮಾ.ಅ 34/2014-15 ದಿನಾಂಕ:20-01-2016

**ಸುತ್ತೋಲೆ**

ವಿಷಯ: 2016-17ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆ/ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗದಲ್ಲಿ) 8ನೇ ತರಗತಿಯಲ್ಲಿ ಒಂದ ಆಂಗ್ಲ ಮಾಧ್ಯಮ ವಿಭಾಗವನ್ನು ತೆರೆಯಲು ಪ್ರಸ್ತಾವನೆಯನ್ನು ಸಲ್ಲಿಸುವ ಕುರಿತು.

---

ಮೇಲಿವ ವಿಷಯಕ್ಕೆ ಸಂಬಂಧಿಸಿದಂತೆ, 2016-17ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆ/ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗದಲ್ಲಿ) 8ನೇ ತರಗತಿಯಲ್ಲಿ ಒಂದು ಆಂಗ್ಲ ಮಾಧ್ಯಮ ವಿಭಾಗವನ್ನು ತೆರೆಯಲು ಅನುಮತಿಗಾಗಿ ಈ ಕೆಳಕಂಡ ದಿನಾಂಕದೊಳಗೆ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ. **ಅಂತಿಮ ದಿನಾಂಕದ ನಂತರ ಬರುವ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದಿಲ್ಲವೆಂದು ಸೂಚಿಸಿದೆ.**

| ಕ್ರ.ಸಂ | ಕಛೇರಿ | ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ |
|---|---|---|
| 01 | ಶಾಲಾ ಮುಖ್ಯ ಶಿಕ್ಷಕರು ಪ್ರಸ್ತಾವನೆಯನ್ನು ಬಿ.ಇ.ಓ ಕಛೇರಿಗೆ ಸಲ್ಲಿಸಲು | 15-02-2016 |
| 02 | ಬಿ.ಇ.ಓ ಕಛೇರಿಯಿಂದ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸಲು | 15-03-2016 |
| 03 | ಜಿಲ್ಲಾ ಉಪನಿರ್ದೇಶಕರ ಕಛೇರಿಯಿಂದ ಆಯುಕ್ತರ ಕಛೇರಿಗೆ ಸಲ್ಲಿಸಲು | 30-03-2016 |

ಸದರಿ ಪ್ರಸ್ತಾವನೆಯು ಈ ಕೆಳಕಂಡ ಮಾಹಿತಿಯನ್ನು ಒಳಗೊಂಡಿರಬೇಕು ಮತ್ತು ಶಾಲಾ ಮುಖ್ಯಸ್ಥರು /ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವಂತೆ ತಿಳಿಸಿದೆ.

A1

1. ಶಾಲೆಯು ಪ್ರಾರಂಭವಾದ ವರ್ಷ ಮತ್ತು ಆದೇಶದ ಪ್ರತಿಯನ್ನು ಒದಗಿಸುವುದು.
2. ಶಾಲೆಯಲ್ಲಿ ಆಂಗ್ಲ ಮಾಧ್ಯಮ ವಿಭಾಗವನ್ನು ಪ್ರಾರಂಭಿಸಲು ಮೂಲಭೂತ ಸೌಕರ್ಯದ ಹಾಗೂ ಹೆಚ್ಚುವರಿ ಕೊಠಡಿ ಇರುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗೆ ಭೇಟಿ ನೀಡಿ ದೃಢೀಕರಿಸಿ ಪ್ರಸ್ತಾವನೆಯನ್ನು ಸಲ್ಲಿಸಬೇಕು.
3. ಶಾಲೆಯಲ್ಲಿ ಹೆಚ್ಚುವರಿ ಕೊಠಡಿ/ಶಿಕ್ಷಕರು ಇಲ್ಲದಿದ್ದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲೇ ಪ್ರಸ್ತಾವನೆಯನ್ನು ತಿರಸ್ಕರಿಸುವಂತೆ ತಿಳಿಸಿದೆ.
4. ಶಾಲೆಯಲ್ಲಿನ ಪ್ರಸ್ತುತ ವಿದ್ಯಾರ್ಥಿಗಳ ದಾಖಲಾತಿ:ಹಾಜರಾತಿ.
5. ಎಸ್.ಡಿ.ಎಂ.ಸಿ ಯ ನಡಾವಳಿ.
6. ಹಾಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ, ಹೆಸರು ಮತ್ತು ಪದನಾಮ.

28/1 28/1/2016

23700
29/01/16

7. ಶಾಲೆಯಲ್ಲಿ ಆಂಗ್ಲ ಮಾಧ್ಯಮ ವಿಭಾಗದ ಮಂಜೂರಾತಿಗೆ ಶಾಲೆಯಲ್ಲಿರುವ ಶಿಕ್ಷಕರುಗಳೇ ಬೋಧನೆಯನ್ನು ಮಾಡಬೇಕು ಎನ್ನುವುದನ್ನು ಖಾತ್ರಿಪಡಿಸಿಕೊಳ್ಳಬೇಕು , ಹೆಚ್ಚುವರಿ ಶಿಕ್ಷಕರ ಬೇಡಿಕೆ ಇಡಬಾರದು ಎಂಬುದನ್ನು ಮುಖ್ಯ ಶಿಕ್ಷಕರುಗಳಿಂದ ಪ್ರಸ್ತಾವನೆಯನ್ನು ಪಡೆಯುವಾಗ ದೃಢೀಕರಣ ಪತ್ರವನ್ನು ಪಡೆಯುವುದು.
8. ಯಾವುದೇ ಕಾರಣಕ್ಕೂ ಹೆಚ್ಚುವರಿ ಶಿಕ್ಷಕರನ್ನು ಶಾಲೆಯಲ್ಲಿ ಉಳಿಸಲು ಆಂಗ್ಲ ಮಾಧ್ಯಮ ವಿಭಾಗವನ್ನು ತೆರೆಯಲು ಪ್ರಸ್ತಾವನೆಯನ್ನು ಸಲ್ಲಿಸಬಾರದು.
9. ಆಂಗ್ಲ ಮಾಧ್ಯಮಕ್ಕೆ ದಾಖಲಾಗಬಹುದಾದ ವಿದ್ಯಾರ್ಥಿಗಳ ಸಂಖ್ಯೆ-(ಫೀಡರ್ ಶಾಲೆಯ ಸಂಖ್ಯೆ)

Hulemmaiah

ನಿರ್ದೇಶಕರು(ಪ್ರೌಢಶಿಕ್ಷಣ)

ಗೆ,

1.ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮುಂದಿನ ಕ್ರಮಕ್ಕಾಗಿ.

2.ಕ/ಪ್ರ